# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ:ಎಡಿಸ್ ಆರ್.ಇ.ವಿ.ಎಸ್.ಆರ್: 203/14-15

ದಿನಾಂಕ : 08-10-2016.

ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ ,ಭಾ.ಆ.ಸೇ.
ಉಪವಿಭಾಗಾಧಿಕಾರಿ
ಪುತ್ತೂರು ಉಪ ವಿಭಾಗ, ಪುತ್ತೂರು.

ಮೇಲ್ಮನವಿದಾರರು

1. ಶ್ರೀಮತಿ ಬೊಮ್ಮಿ
   ಕೋಂ ನಾವುರ ಮೇರ
2. ಶ್ರೀಮತಿ ಲೀಲ
   ಬಿನ್ ನಾವುರ ಮೇರ
3. ಶ್ರೀಮತಿ ಸುಶೀಲ
   ಬಿನ್ ನಾವುರ ಮೇರ
4. ಶ್ರೀಮತಿ ಯಶೋಧ
   ಬಿನ್ ನಾವುರ ಮೇರ
5. ಶ್ರೀಮತಿ ಚಂದ್ರಾವತಿ
   ಬಿನ್ ನಾವುರ ಮೇರ
6. ಶ್ರೀಮತಿ ಶಾಲಿನಿ
   ಬಿನ್ ನಾವುರ ಮೇರ
7. ಶ್ರೀ ಭಾಸ್ಕರ
8. ಬಿನ್ ನಾವುರ ಮೇರ

(1-7 ಕಾಂಜರ ಕಟ್ಟೆ ಮನೆ, ವೇಣೂರು ಗ್ರಾಮ
ಬೆಳ್ತಂಗಡಿ ತಾಲೂಕು, ದ.ಕ.)
(ನ್ಯಾಯವಾದಿ: ಎಂ. ಬಿ ಸಂಪಿಗೆತ್ತಾಯ)

- ಮತ್ತು -

ಪ್ರತಿವಾದಿಯವರು

ತಹಶೀಲ್ದಾರರು
ಬೆಳ್ತಂಗಡಿ ತಾಲೂಕು ದ.ಕ.

**--**

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 49 ರಂತೆ ನಿಯಮ 108(ಡಿ) ಯನ್ನು ಓದುದರೊಂದಿಗೆ ವೇಣೂರು ಗ್ರಾಮದ ಎನ್.ಸಿ.ಆರ್.ಸಿ.ಆರ್ 87/98-99 ದಿನಾಂಕ: 28/09/2004 ರ ಅರ್ಜಿಯಲ್ಲಿ ಸ.ನಂ. 193/1 ರ 1.50 ಎಕ್ರೆ ಜಮೀನಿನ ಅಕ್ರಮ ಸಕ್ರಮಕ್ಕಾಗಿ ಕೋರಿರುವುದನ್ನು ಪರಿಣಾಮಕಾರಿಯಾದ ಕೃತಾವಳಿಗಳಿರುವುದಿಲ್ಲವೆಂದು ಪ್ರತಿವಾದಿಗಳು ದಿನಾಂಕ: 28-09-2004 ರಲ್ಲಿ ನೀಡಿದ ಹಿಂಬರಹವನ್ನು ಪ್ರಶ್ನಿಸಿ ಈ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ವೇಣೂರು ಗ್ರಾಮದ ಸ.ನಂ. 193/1 ರ ಪೈಕಿ ವಿಸ್ತೀರ್ಣ 1.50 ಎಕ್ರೆ ಸರಕಾರಿ ಜಮೀನನ್ನು 1ನೇ ಮೇಲ್ಮನವಿದಾರರ ಗಂಡ ಹಾಗೂ 2 ರಿಂದ 7ನೇ ಮೇಲ್ಮನವಿದಾರರ ತಂದೆ ನಾವುರ ಮೇರ ಎಂಬವರು ಸ್ವಾಧೀನ ಹೊಂದಿ ಅವರ ಅಜ್ಜನ ಕಾಲದಿಂದಲೇ ಜಮೀನಿನ ಖಾಸ ಸ್ವಾಧೀನತೆ ಹೊಂದಿ ಕೃಷಿ ಕೃತಾವಳಿಗಳನ್ನು ಮಾಡಿ ಅದನ್ನು ಅನುಭವಿಸಿಕೊಂಡು ಬರುತ್ತಿದ್ದರು. ಈ ಸ್ವಾಧೀನತೆಯ ಬಗ್ಗೆ ಯಾವುದೇ ತಕರಾರುಗಳು ಯಾರಿಂದಲೂ ಇದ್ದಿರುವುದಿಲ್ಲ. ಹೀಗಿರುವಲ್ಲಿ ದಿನಾಂಕ: 24-02-1999 ರಂದು ನಾವುರ ಮೇರ ನವರು ವಾರೀಸುದಾರರನ್ನು ಬಿಟ್ಟಗಲಿರುತ್ತಾರೆ. ಅವರ ಜೀವಿತ ಕಾಲದಲ್ಲಿ ಸದ್ರಿ ಜಮೀನಿನಲ್ಲಿ ವಾಸದ ಮನೆಯನ್ನು ಹೊಂದಿದ್ದರು. ಆಕ್ರಮಿತ ಜಮೀನಿಗೆ ಅಗಲು ತೆಗೆದು ಬೇಲಿ ಮಾಡಿದ್ದರು. ಅಲ್ಲದೆ ಸದ್ರಿ ಜಮೀನಿನ ಮಂಜೂರಾತಿ ಕೋರಿ ನಮೂನೆ – 53 ರಲ್ಲಿ ಪ್ರತಿವಾದಿಗೆ ಅಕ್ರಮ ಸಕ್ರಮದ ಎಲ್ಲಾ ನಿಯಮಾವಳಿಗಳಂತೆ ಅರ್ಹತೆ ಹೊಂದಿರುವ ಕಾರಣ ನಿಗದಿತ ಅವಧಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವುದಾಗಿದೆ. ಸದ್ರಿ ಅರ್ಜಿಯು NCRCR: 87/98-99 ಎಂದು ಪ್ರತಿವಾದಿಯ ಕಛೇರಿಯಲ್ಲಿ ನೋಂದಾಯಿಸಲ್ಪಟ್ಟಿರುತ್ತದೆ. ಹಾಗೆಯೇ ಅರ್ಜಿಯು ತನಿಖೆಗಾಗಿ ಬಾಕಿ ಇದ್ದಿರುವುದಾಗಿದೆ. ಅರ್ಜಿ ತನಿಖೆಗೆ ಬಾಕಿ ಇರುವ ಸಮಯದಲ್ಲಿಯೇ ನಾವುರ ಮೇರ ನವರು ಪೌತರಾದ ಕಾರಣ ಅರ್ಜಿಯ ತನಿಖೆಯನ್ನು ಮಾಡದೆ, ಪ್ರತಿವಾದಿ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ತನಿಖೆ ಮಾಡದೆ, ಕೃಷಿ ಕೃತಾವಳಿಗಳನ್ನು ಮತ್ತು ವಾಸದ ಮನೆಯನ್ನು ಸಹ ಪರಿಗಣಿಸದೆ, ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 39 ನ್ನು ಪರಿಗಣಿಸದೆ ಹಿಂಬರಹ ನೀಡಿರುವುದು ಮತ್ತು ಮೇಲ್ಮನವಿದಾರರಿಗೆ ನೋಟೀಸು ನೀಡಿ, ತನಿಖೆ ನಡೆಸದ ಕ್ರಮ ಕೈಗೊಂಡಿರುವುದು ಕಾನೂನು ಬಾಹಿರವಾಗಿರುವುದರಿಂದ ಸದ್ರಿ ಹಿಂಬರಹವನ್ನು ಪ್ರಶ್ನಿಸಿ ಈ ಮೇಲ್ಮನವಿಯನ್ನು ವಿಳಂಬ ವಿನಾಯಿತಿ ಅರ್ಜಿ ಸಹಿತ ಸಲ್ಲಿಸಲಾಗಿದೆ. ಮೇಲ್ಮನವಿಯನ್ನು ಪುರಸ್ಕರಿಸಿ ಪ್ರತಿವಾದಿಯ ದಿನಾಂಕ: 28-09-2004 ರ ಹಿಂಬರಹವನ್ನು ವಜಾಗೊಳಿಸಿ ಮೇಲ್ಮನವಿದಾರರ ತಂದೆಯ ಅರ್ಜಿಯನ್ನು ಉತ್ತರಾಧಿಕಾರಿಗಳ ನೆಲೆಯಲ್ಲಿ ಪರಿಗಣಿಸಿ ಜಮೀನು ಮಂಜೂರು ಮಾಡಿಕೊಡಲು ಪ್ರತಿವಾದಿಗೆ ಆದೇಶಿಸಬೇಕೆಂದು ಮೇಲ್ಮನವಿಯಲ್ಲಿ ಪ್ರಾರ್ಥಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಅಂಗೀಕರಿಸಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ದಿನಾಂಕ : 10-03-2015 ರಂದು ಹಾಜರಾಗುವಂತೆ ನೋಟೀಸು ನೀಡಿ ವಾದಿ ಪ್ರತಿವಾದಿಗಳಿಗೆ ಯುಕ್ತ ಅವಕಾಶಗಳನ್ನು ನೀಡುವ ಸಲುವಾಗಿ ಪ್ರಕರಣವನ್ನು ಕಾಲಕಾಲಕ್ಕೆ ಮುಂದೂಡಿ ಅಂತಿಮವಾಗಿ ದಿನಾಂಕ: 02-08-2016 ರಂದು ವಿಚಾರಣೆ ನಡೆಸಿ ದಿನಾಂಕ: 30-08-2016 ಕ್ಕೆ ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆಗೆ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ವಾದದಲ್ಲಿಯೂ ಪುನರುಚ್ಚರಿಸುತ್ತಾ 1ನೇ ಮೇಲ್ಮನವಿದಾರರ ಗಂಡ ಹಾಗೂ 2 ರಿಂದ 7ನೇ ಮೇಲ್ಮನವಿದಾರರ ತಂದೆ ಆಕ್ರಮಣ ಮಾಡಿದ ಜಮೀನಿನಲ್ಲಿರುವ ಕೃತಾವಳಿಗಳನ್ನು ಪರಿಶೀಲಿಸಿ ಆಕ್ರಮಿತ ಜಮೀನು ಸರಕಾರಿ ಜಮೀನಾಗಿರುವುದರಿಂದ ಮಂಜೂರಾತಿ ಮಾಡಿಕೊಡುವಂತೆ ಕೋರಿರುತ್ತಾರೆ. ಅಲ್ಲದೆ ಕೋರಿಕೆ ಜಮೀನು ಸರಕಾರಿ ಜಮಮೀನಾಗಿದ್ದು ಸ್ಥಳ ಪರಿಶೀಲನೆ ನಡೆಸದೆ, ಅರ್ಜಿ ತಿರಸ್ಕರಿಸಿದ ಆದೇಶ ರದ್ದುಪಡಿಸಿ ನಮೂನೆ 53 ರ ಅರ್ಜಿಯನ್ನು ಮಂಜೂರಾತಿಗೆ ಸಮಿತಿ ಮುಂದೆ ಮಂಡನೆ ಮಾಡುವಂತೆ ಪ್ರತಿವಾದಿಗೆ ಆದೇಶ ಮಾಡಬೇಕೆಂದು ಕೋರಿ ವಾದ ಮಂಡಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ವೇಣೂರು ಗ್ರಾಮದ ಎನ್.ಸಿ.ಆರ್.ಸಿ.ಆರ್ 87/98-99 ರಲ್ಲಿ ತಹಶೀಲ್ದಾರರು ಅಧೀನ ಅಧಿಕಾರಿಗಳಾದ ಗ್ರಾಮಲೆಕ್ಕಿಗರು ಮತ್ತು ಕಂದಾಯ ನಿರೀಕ್ಷಕರುಗಳಿಗೆ

ಅರ್ಜಿಯನ್ನು ರವಾನಿಸಿ ವರದಿಯನ್ನು ಬಯಸಿರುತ್ತಾರೆ. ಕಂದಾಯ ನಿರೀಕ್ಷಕರು ಮತ್ತು ಗ್ರಾಮಕರಣಿಕರು ತಯಾರಿಸಿದ ಸ್ಥಳ ಮಹಜರಿನಂತೆ ಕೋರಿಕೆ ಜಮೀನಿನಲ್ಲಿ ಪರಿಣಾಮಕಾರಿಯಾದ ಕೃತಾವಳಿ ಇರುವುದಿಲ್ಲವೆಂದು ಪಂಚರು ನಿರ್ಧರಿಸಿರುತ್ತಾರೆ. ಇದರ ಆಧಾರದಲ್ಲಿ ಪಡೆದ ವರದಿಯಂತೆ ತಹಶೀಲ್ದಾರರು ಅರ್ಜಿದಾರರಿಗೆ ಸೂಕ್ತ ಹಿಂಬರಹವನ್ನು ಅರ್ಜಿ ತಿರಸ್ಕರಿಸಿದ ಬಗ್ಗೆ ನೀಡಿರುವುದು ಕಡತದಲ್ಲಿ ಲಗತ್ತಿದೆ.

ದಿನಾಂಕ 07-07-2016 ರಂದು ಮೇಲ್ಮನವಿದಾರರು ಸ್ಥಳತನಿಖೆಗೆ ನ್ಯಾಯಾಲಯದಲ್ಲಿ ಕೋರಿಕೆ ಸಲ್ಲಿಸಿರುವಂತೆ ದಿನಾಂಕ 25-06-2016 ರಂದು ಸ್ಥಳತನಿಖೆ ಮಾಡಲಾಗಿ ಮಂಜೂರಾತಿ ಕೋರಿದ ಜಮೀನಿನಲ್ಲಿ ಯಾವುದೇ ಕೃತಾವಳಿ ಇರುವುದು ಕಂಡುಬರುವುದಿಲ್ಲ. ಕೃತಾವಳಿ ಇಲ್ಲದ ಜಮೀನನ್ನು ಅಕ್ರಮ ಸಕ್ರಮದಲ್ಲಿ ಪರಿಗಣಿಸಲು ಅವಕಾಶವಿರುವುದಿಲ್ಲ. ಆದ್ದರಿಂದ ಈ ಕೆಳಗಿನಂತೆ ಆದೇಶ ಮಾಡಿದೆ.

<u>ಆದೇಶ.</u>

ಮೇಲ್ಮನವಿಯನ್ನು ತಿರಸ್ಕರಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ : 08 -11 - 2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

ಡಾ.ರಾಜೇಂದ್ರ ಕೆ.ವಿ, ಐ.ಎ.ಎಸ್.
ಸಹಾಯಕ ಆಯುಕ್ತರು,
ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಎಂ ಬಿ ಸಂಪಿಗೆತ್ತಾಯ ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಕಡತ ಸಂಖ್ಯೆ ಎನ್.ಸಿ.ಆರ್.ಸಿ.ಆರ್ 87/98-99 ಪುಟ ಸಂಖ್ಯೆ 1 ರಿಂದ 10 ವರೆಗೆ ರವಾನಿಸುತ್ತ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಿದೆ.